# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಯವರ ನ್ಯಾಯಾಲಯ
# ಕುಣಿಗಲ್

## ಸಿ.ಸಿ.1094/2018

ಪಿರ್ಯಾಧಿ ಃ **ಕುಣಿಗಲ್ ಪೊಲೀಸ್**

ವಿರುದ್ಧ

ಆರೋಪಿ ಃ

ಎ 1. **ಸಿದ್ದಗಂಗಯ್ಯ ಬಿನ್ ಲಿಂಗಪ್ಪ ,**
ವಯಸ್ಸು 45 ವರ್ಷ,

ಎ 2. **ಸಿದ್ದೇಶ ಬಿನ್ ಲೇಟ್ ಪುಟ್ಟರಾಮಯ್ಯ,**
ವಯಸ್ಸು 45 ವರ್ಷ,

ಎ 3. **ಗಂಗಮ್ಮ ಕೋಂ ಸಿದ್ದೇಶ,**
ವಯಸ್ಸು 35 ವರ್ಷ,

ಎ 4. **ಬೈರಯ್ಯ ಬಿನ್ ಲೇಟ್ ಪುಟ್ಟರಾಮಯ್ಯ,**
ವಯಸ್ಸು 48 ವರ್ಷ,

ಎ 5. **ಹೇಮಲತಾ ಕೋಂ ಸಿದ್ದಗಂಗಯ್ಯ,**
ವಯಸ್ಸು 35 ವರ್ಷ,

ಎಲ್ಲರೂ  ವಾಸಃ ಗೌಡಯ್ಯನಪಾಳ್ಯ ಗ್ರಾಮ,
ಹುತ್ರಿದುರ್ಗ ಹೋಬಳಿ, ಕುಣಿಗಲ್ ತಾ.

## ದೋಷಾರೋಪಣೆ

ದಿನಾಂಕ 04/04/2018 ರಂದು ಕುಣಿಗಲ್ ತಾಲ್ಲೂಕು, ಹುತ್ರಿದುರ್ಗ ಹೋಬಳಿ, ಗೌಡಯ್ಯನಪಾಳ್ಯ ಗ್ರಾಮದ ಸಾಕ್ಷಿ –1 (ಗೌಡಯ್ಯ) ರವರ ಹೊಲಕ್ಕೆ ಗೊಬ್ಬರ ಹೊಡೆಯಲು, 1 ಮತ್ತು 2 ನೇ ಆರೋಪಿಯಾದ ನೀವು ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 447 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ನನ್ನ ವ್ಯಾಪ್ತಿಯಲ್ಲಿ ಮಾಡಿದ್ದೀರಾ  ಎಂದು ನಿಮ್ಮ ಮೇಲೆ ಆರೋಪ ಇದೆ.

ದಿನಾಂಕ 06/04/2018 ರಂದು 1 ರಿಂದ 5 ನೇ ಆರೋಪಿಯಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಮೇಲೆ ಹೇಳಿದ ಘಟನೆಯ ದ್ವೇಷದಿಂದ ಸಾಕ್ಷಿ–1 ಮತ್ತು 2 ರವರನ್ನು ಅಕ್ರಮವಾಗಿ ತಡೆದಿದ್ದು , ಆ ಮೂಲಕ ಭಾ.ದಂ.ಸಂ. ಕಲಂ 341 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ನನ್ನ ವ್ಯಾಪ್ತಿಯಲ್ಲಿ ಮಾಡಿದ್ದೀರಾ  ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲೆ ಹೇಳಿದ ದಿನಾಂಕಗಳಂದು, ವೇಳೆ ಹಾಗೂ ಸ್ಥಳದಲ್ಲಿ, ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡಿದ್ದಲ್ಲದೇ ಆರೋಪಿತರಾದ ನೀವುಗಳು ಚಾಸಾ–1 ಮತ್ತು 2 ರವರನ್ನು ಅವಾಚ್ಯ ಶಬ್ಧಗಳಿಂದ ಬೈದಿದ್ದು ಮತ್ತು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 504, 506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ನನ್ನ ವ್ಯಾಪ್ತಿಯಲ್ಲಿ ಮಾಡಿದ್ದೀರಾ  ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ ಅಥವಾ ಅರ್ಥವಾಯಿತೇ?

ಉತ್ತರ ಃ **ಅರ್ಥವಾಯಿತು**

ಪ್ರಶ್ನೆ 2 ಃ ನೀವು ಈ ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ ಃ **ವಿಚಾರಣೆಯಾಗಬೇಕು**

(ಮೇಲಿನಂತೆ ಆರೋಪಣೆ ಓದಿ ಹೇಳಿ ಆರೋಪಿಗಳು ನೀಡಿದ ಉತ್ತರವನ್ನು ನಮೂದು ಮಾಡಿ ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವುದರಿಂದ ವಿಚಾರಣೆಯನ್ನು ನಡೆಯಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ)

ಸಹಿ/-

ದಿನಾಂಕಃ 20/09/2021

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್